# ಅಂದುಕೊಂಡಿದ್ದೆ

ಇನ್ನೂ ಹಣವ ಬಿಡಬೇಕೆಂದಿದ್ದೆ.
ಯಾರಿಲ್ಲದ ನೋಡಿ
ಅಜ್ಜಿಯ ಮಸಾಲೆಡಬ್ಬಿಯಲಿ
ಅವಿತಿದ್ದ ಎಂಟಾಣೆ ಕದ್ದಿದ್ದೆ.


ಹೆಣವ
ನೋಡಬಾರದೆಂದಿದ್ದೆ.
ಕಣ್ಮುಂದೆ ಸತ್ತ ಅಜ್ಜನ
ಕಣ್ಣು ಪಿಳುಕಿಸದೆ ನೋಡಿದ್ದೆ.

ಇಂದಾದರು
ಹೊಟ್ಟೆ ತುಂಬ ಉಣಬೇಕು
ಎಂದುಕೊಂಡಿದ್ದೆ.
ಉಪವಾಸ
ದೇವರು ಕೊಟ್ಟ ಅನಿಯಮಿತ
ಬಂಪರ್ ಉಡುಗೊರೆ ಎಂದು
ಡೇಗು ಬಿಟ್ಟಿದ್ದೆ.

ಅನುದಿನವು
ನಗುನಗುತಿರಬೇಕೆಂದು ಕೇಳಿಸಿಕೊಂಡಿದ್ದೆ.
ದಿನರಾತ್ರಿ,
ಅಪ್ಪನ ನೆನೆಸಿ
ಅವ್ವ ಅಳುವುದ ನೋಡಿ ಕಣ್ಣೀರೊರೆಸಿದ್ದೆ.

ಬೆಳಗಿನ
ಬಡತನ ಕಂಡು ಬೆವರಿದ್ದೆ.
ಕನಸಿನ ಸಿರಿತನ
ಕಂಡು ನಿದ್ರೆಗೆ ದೂರವಾಗಿದ್ದೆ.

ನನಗೆ
ಮರೆವಿನ ಕಾಯಿಲೆಯಿದೆ ಎಂದು
ಸಂತೋಷಪಟ್ಟಿದ್ದೆ.




ಕಾಡುವ ನೆನಪುಗಳು
ಭಾಸವಾದಾಗ ಸೋತು ಶರಣಾಗಿದ್ದೆ.
ಮೌನವಾಗಬೇಕೆಂದಿದ್ದೆ.
ತೊದಲಾಡುವವರ
ಕಂಡು ತೊದಲಾಡಿದೆ.

● ಬಿ.ಎಲ್. ಆನಂದ ಆರ್ಯ